


‘ಕರುನಾಡ ಅರಸೊತ್ತಿಗೆಗಳು’ ಪಟದ ನೋಟ

ಕೆಂಪು ಪಟ್ಟಿ ಆಯಾ ರಾಜವಂಶಗಳು ಆಳ್ವಿಕೆ ಆರಂಭಿಸಿದ ಕಾಲಮಾನ ಮತ್ತು ಅರಸನ ಹೆಸರು, ರಾಜಧಾನಿಯ ಮಾಹಿತಿ ನೀಡಿದರೆ, ನೀಲಿ ಪಟ್ಟಿ ಆ ವಂಶದ ಆಡಳಿತ ಹೇಗೆ, ಯಾರಿಂದ ಅಂತ್ಯವಾಯಿತು ಎಂಬುದನ್ನು ತಿಳಿಸುತ್ತದೆ. ಕರ್ನಾಟಕದ ಎರಡು ನಕಾಶೆಯನ್ನು ಚಿತ್ರಿಸಲಾಗಿದ್ದು, ಒಂದು– ಪ್ರಸ್ತುತ ಕರ್ನಾಟಕ ರಾಜ್ಯದ ನಕಾಶೆ, ಮತ್ತೊಂದು– ಕರ್ನಾಟಕವನ್ನಾಳಿದ ಅರಸೊತ್ತಿಗೆಗಳ ರಾಜಧಾನಿಯನ್ನು ಪ್ರತಿಬಿಂಬಿಸುತ್ತದೆ. ಪಟ ರಚಿಸಲು ನೆರವು ಪಡೆದ 65 ಆಕರ ಗ್ರಂಥಗಳ ಹೆಸರುಗಳನ್ನೂ ಮುದ್ರಿಸಲಾಗಿದೆ. ಇತಿಹಾಸದ ಮಾಹಿತಿ ಹೊತ್ತ ಈ ಪಟವು ‘ಐಎಸ್‌ಬಿಎನ್’ (ಅಂತರರಾಷ್ಟ್ರೀಯ ಮಾನದಂಡದ ಪುಸ್ತಕ ಸಂಖ್ಯೆ) ಅಡಿಯಲ್ಲಿ ನೋಂದಣಿಯಾಗಿದೆ.

ಬೃಹತ್ ಪಟವನ್ನು ರೂಪಿಸಲು ಸತತ ಒಂದು ವರ್ಷ, ಪ್ರತಿದಿನ 4ರಿಂದ 6 ಗಂಟೆ ಮೀಸಲಿಟ್ಟಿರುವ 60ರ ಹರೆಯದ ಬಸವರಾಜ್ ಯಳಮಲ್ಲಿ ಅವರು ಮಾಹಿತಿ ಹೆಕ್ಕಿದ ಸಂಕಥನವನ್ನು ಬಿಚ್ಚಿಡುವರು. ‘ಕರ್ನಾಟಕವನ್ನು 200ಕ್ಕೂ ಹೆಚ್ಚು ರಾಜ ಮನೆತನಗಳು ಆಳಿವೆ. ಮಾಹಿತಿ ಲಭ್ಯ ಇರುವುದು 132 ರಾಜವಂಶಗಳ ಬಗ್ಗೆ ಮಾತ್ರ. ಇನ್ನುಳಿದ ರಾಜ ಮನೆತನಗಳ ಬಗ್ಗೆ ಪ್ರಬಂಧ, ಲೇಖನ ರೂಪದಲ್ಲಿ ಮಾತ್ರ ಮುದ್ರಿತವಾಗಿವೆಯೇ ಹೊರತು ಅಧಿಕೃತ ಮಾಹಿತಿ ಇಲ್ಲ. ಈಗಿರುವ ಮಾಹಿತಿ ಕೂಡ ಯಾವ ಪುಸ್ತಕದಲ್ಲೂ ಕ್ರಮಬದ್ಧವಾಗಿ ಇಲ್ಲ. ಬಹುತೇಕ ಪುಸ್ತಕಗಳು ವಿದ್ಯಾರ್ಥಿಗಳ ಪರೀಕ್ಷೆ ದೃಷ್ಟಿಯಿಂದಷ್ಟೇ ರಚನೆಗೊಂಡಿವೆ. ಆ ನ್ಯೂನತೆಯನ್ನು ದೂರ ಮಾಡುವ ಕಳಕಳಿಯ ಭಾಗವಾಗಿ ಪಟ ರೂಪುಗೊಂಡಿದೆ. 300ಕ್ಕೂ ಹೆಚ್ಚು ಪುಸ್ತಕಗಳನ್ನು ಅಧ್ಯಯನ ಮಾಡಿ ಅದರಲ್ಲಿ 65 ಪುಸ್ತಕಗಳನ್ನು ಪಟ ರಚನೆಗೆ ಆಯ್ಕೆ



ಬಸವರಾಜ್ ಯಳಮಲ್ಲಿ

ಮಾಡಿಕೊಳ್ಳಲಾಯಿತು’ ಎನ್ನುತ್ತ ಪಟ ರಚನೆಯ ಹಾದಿಯನ್ನು ತೆರೆದಿಟ್ಟರು.

ಬಸವರಾಜ್ ಯಳಮಲ್ಲಿ ಅವರು ತಮ್ಮ ಇತಿಹಾಸದ ಜ್ಞಾನ ಮತ್ತು ವೃತ್ತಿ ಬದುಕಿನ ಅನುಭವಗಳನ್ನು ಧಾರೆ ಎರೆದು ರೂಪಿಸಿದ ತೂಕ ಮತ್ತು ಅಳತೆ ಸಾಧನಗಳ ಸಂಗ್ರಹಾಲಯ ‘ತುಲಾ ಭವನ’ ಅಂತರರಾಷ್ಟ್ರೀಯ ಮಟ್ಟದಲ್ಲೂ ಗಮನ ಸೆಳೆದಿದೆ.

ಈ ಸಂಗ್ರಹಾಲಯದ ಕುರಿತು ಆಸ್ಟ್ರೇಲಿಯಾದ ಇತಿಹಾಸ ತಜ್ಞ ರಿಕ್ಕಿ ಜೆ. ವಿಲ್ಸ್ ಅವರು ತಮ್ಮ **‘Weights of India’** ಪುಸ್ತಕದಲ್ಲಿ ಪ್ರಸ್ತಾಪಿಸಿದ್ದರು. ಪುಸ್ತಕ ಪ್ರಕಟಗೊಂಡ ಬಳಿಕ ಲೇಖಕ ಸ್ವತಃ ಸಂಗ್ರಹಾಲಯಕ್ಕೆ ಭೇಟಿ ನೀಡಿ ಖುಷಿ ಹಂಚಿಕೊಂಡಿದ್ದರು. ಅಂದಿನಿಂದ ಇಬ್ಬರ ನಡುವೆ ನಂಟು ಬೆಳೆದಿತ್ತು. ಇದೆಲ್ಲ ಆಗಿದ್ದು ಕೋವಿಡ್ ಸಂಕಷ್ಟಕ್ಕೂ ಮುನ್ನ. ಬಳಿಕ ‘ದಿ ವೈಟ್ಸ್ ಆಫ್ ಮೊಘಲ್ ಇಂಡಿಯಾ’ ಎನ್ನುವ ಮತ್ತೊಂದು ಪುಸ್ತಕ ರಚನೆಗೆ ಕೈಹಾಕಿದ ರಿಕ್ಕಿ ಅವರು ಭಾರತದ ಮಾಹಿತಿಯ ಪರಿಶೀಲನೆಗೆ ಬಸವರಾಜ್ ಅವರನ್ನು ದೂರವಾಣಿ, ಇ–ಮೇಲ್ ಮೂಲಕ ಸಂಪರ್ಕಿಸುತ್ತಿದ್ದರು. ಅವರು ಕಳುಹಿಸುತ್ತಿದ್ದ ಮಾಹಿತಿಯ ಸತ್ಯಾಸತ್ಯತೆಯನ್ನು ಪರಿಶೀಲಿಸಲು ಹಲವು ಇತಿಹಾಸದ ಪುಸ್ತಕಗಳನ್ನು ಬಸವರಾಜ್ ಅವರು ತಿರುವಿ ಹಾಕುತ್ತಿದ್ದರು.

‘ಒಬ್ಬ ವಿದೇಶಿಗನಿಗೆ ಭಾರತೀಯ ಇತಿಹಾಸದ ಬಗ್ಗೆ ಇಷ್ಟು ಆಸಕ್ತಿ ಇರುವಾಗ ನಾವೇಕೆ ಆ ನಿಟ್ಟಿನಲ್ಲಿ ಹಿಂದೆ ಬಿದ್ದಿದ್ದೇವೆ ಎಂದೆನಿಸಿತು. ಹಾಗಾಗಿ ಕರುನಾಡಿನ ರಾಜ ಮನೆತನಗಳ ಬಗ್ಗೆ ಮಾಹಿತಿ ಹೆಕ್ಕಲು ಆರಂಭಿಸಿದೆ. ಮೊದಲು ಪುಸ್ತಕದ ರೂಪದಲ್ಲಿ ಹೊರತರುವ ಆಲೋಚನೆ ಇತ್ತು. ಪುಸ್ತಕ ಮುದ್ರಣಗೊಂಡು ಒಂದೆಡೆ ಇಡುವಂತಾದರೆ ಹತ್ತರಲ್ಲಿ ಹನ್ನೊಂದು ಎಂಬಂತಾಗುತ್ತದೆ. ಹೊಸದೇನಾದರೂ ಮಾಡಬೇಕು; ವಿದ್ಯಾರ್ಥಿಗಳಿಗೆ, ಇತಿಹಾಸಕ್ತರಿಗೆ ಮಾಹಿತಿ ತಲುಪುವಂತಿರಬೇಕು ಎಂಬ ಯೋಚನೆಯ ಭಾಗವಾಗಿ ಪಟ ಮೊಳಕೆಯೊಡೆಯಿತು’ ಎಂದು ಸಾರ್ಥಕತೆಯ ಭಾವದಿಂದ ನುಡಿಯುವರು ಬಸವರಾಜ್.

ಒಂದೇ ಪಟದಲ್ಲಿ ಅಷ್ಟೊಂದು ಮಾಹಿತಿ ಅಡಕಗೊಳಿಸುವುದು ಸವಾಲಿನ ಕೆಲಸವೇ ಸರಿ. ಈ ಕೆಲಸವನ್ನು ಅಚ್ಚುಕಟ್ಟಾಗಿ ನಿರ್ವಹಿಸಿದ್ದಾರೆ ವಿನ್ಯಾಸಕಾರ ಹಾಗೂ ದಾವಣಗೆರೆಯ ಚಂದನ್ ಪಬ್ಲಿಸಿಟಿಯ ಡಿ. ಶೇಷಾಚಲ. ಇವರಿಬ್ಬರ ನಡುವಿನ ಕೊಂಡಿಯಾಗಿ ಎನ್.ಟಿ. ಮಂಜುನಾಥ್ ಕೆಲಸ ಮಾಡಿದ್ದಾರೆ. ಸಂತೇಬೆನ್ನೂರಿನ ಹೊನ್ನಪ್ಪ ಗೌಡ, ನವೀನ್‌ಕುಮಾರ್ ಎನ್.ಆರ್. ನೇರ್ಲಿಗಿ, ನಂದೀಶ್ ಪಿ.ಮುದಹದಡಿ, ಶ್ರೀರಾಜ್ ಯಳಮಲ್ಲಿ ಅವರು ಪಟ ರಚನೆಗೆ ಹೆಗಲು ಕೊಟ್ಟಿದ್ದಾರೆ.

ಪ್ರತಿಕ್ರಿಯಿಸಿ: **feedback@sudha.co.in**